ಬೇರೆ ಪಂಗಡದವರೂ ಇದ್ದಾರೆ ಎಂದು ಭಾವಿಸ ಬಹುದೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದು ವರೆಗೂ ಆದೇ ರೀತಿ ಇತರ ಪಂಗಡದವರನ್ನೂ backward communities ಎಂದು ಮುಂದುವರಿಸಿಕೊಂಡು ಬಂದಿದ್ದೇವೆ.

ಶ್ರೀ ಎ. ಜಿ. ಬಂದೀಗೌಡರು.—ನನ್ನ ಅರ್ಥ ಏನೆಂದರೆ ಕೇಂದ್ರ ಸರ್ಕಾರದವರು ಕೆಲವು ನಿಯಮ ಗಳನ್ನು ಹಾಕಿ ಆ ನಿಯಮಗಳಿಗೆ ಯಾರ್ಯಾರು ಅನ್ವಯ ವಾಗುತ್ತಾರೋ ಅವರೆಲ್ಲಾ backward communities ಎಂದು ಭಾವಿಸಿರುತ್ತಾರೆ. ಅದರಲ್ಲಿ 14 ಜನ ಬಂದಿದ್ದಾರೆ. ಆದ್ದರಿಂದ ಇವರು backward communities ಎಂದು ಅರ್ಥವಾಗುತ್ತದೆ. ನಮ್ಮ ಮೈಸೂರು ದೇಶದಲ್ಲಿ ಇಟ್ಟುಕೊಂಡಿರುವ ಹಾಗೆ ಇವರ ಲ್ಲದೆ ಇತರ ಪಂಗಡದವರೂ backward communities ಇದ್ದಾರೆ ಎಂದು ತಿಳಿದುಕೊಳ್ಳ ಬಹುದೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಿಳಿದು ಕೊಳ್ಳಬಹುದು.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ.)—ಶೇಕಡ 5ಕ್ಕಿಂತ ಜಾಸ್ತಿಯಾಗಿ ಹಿಂದುಳಿದ ಪಂಗಡದವ ರಿಂದ ಅವರ ಹಿತಕ್ಕೆ ತೊಂದರೆಯಾಗದಂತೆ, ಹಿತರಕ್ಷಣೆ ಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈ ಲೆಜಿಸ್ಲೇಚರ್‌ಗೆ ಸ್ವಾತಂತ್ರ್ಯವಿದೆ ಎಂದು ಭಾವಿಸಿಕೊಂಡಿ ದ್ದೇವೆ. ನೂಕ್ತವಿದ್ದಲ್ಲಿ ಯಾರ್ಯಾರಿಗೆ ಯಾವ್ಯಾವ ರಿಯಾಯಿತಿ ಒದಗಿಸಬಹುದೋ ಅದಕ್ಕೆ ಏನೂ ಅಡ್ಡಿ ಬರುವುದಿಲ್ಲ ಎಂದು ಸರ್ಕಾರದ ಭಾವನೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಹಿಂದುಳಿದ ಪಂಗಡಗಳು 14 ಪಂಗಡಗಳಿವೆ. ಅವುಗಳ ಆರ್ಥಿಕಸ್ಥಿತಿ, ವಿದ್ಯಾಭಿ ವೃದ್ಧಿ ಮತ್ತು ಸಮಾಜದಲ್ಲಿ ಎಷ್ಟು ಮಟ್ಟಿಗೆ ಮುಂದು ವರಿಸಿದ್ದಾರೆ ಎಂಬುದನ್ನು ಪರಿಶೀಲನೆ ಮಾಡುವ ಉದ್ದೇಶದಿಂದಲೇ ಅಲ್ಲವೆ ಒಂದು ಕಮೀಷನ್ ನೇಮಕ ವಾದದ್ದು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇರ ಬಹುದು.

ಶ್ರೀ ಎಂ. ಮಾದಯ್ಯನವರು; —ಕಾರ್ಸ್ಟಿಟ್ಯೂಷನ್‌ನಲ್ಲಿ 341ನೇ ಆರ್ಟಿಕಲ್ ಇರುವುದು ಅವರಿಗೆ ಇದುವರೆಗೂ ಕೊಟ್ಟಿರುವುದಕ್ಕಿಂತಲೂ ಹೆಚ್ಚಾಗಿ ವಿಶೇಷ ರಿಯಾಯಿತಿ ಕೊಡುವುದಕ್ಕಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೆ ಅಂತ ಹೇಳುವುದಕ್ಕಾಗುವುದಿಲ್ಲ.

Mr. SPEAKER.—I think it would be better if the Hon'ble Member leaves it at that.

ಶ್ರೀ ಎಂ. ಮಾದಯ್ಯನವರು.—ಅದು ಸ್ಪಷ್ಟವಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇತರ ಕಡೆಗಳಲ್ಲಿ schedule class ಅಥವಾ backward classesಗೆ ನಾವು ಕೊಡುತ್ತಿರುವ ರಿಯಾಯಿತಿ ಕೊಡದೇ ಇರಬಹುದು. ನಾವು ಕೊಡುತ್ತಿರುವುದು ಅದಕ್ಕಿಂತ ಕಡಿಮೆಯಿಲ್ಲ ಎಂದು ಭಾವಿಸಬಹುದು ಆದ್ದ ರಿಂದ ಇನ್ನೂ ಹೆಚ್ಚಾಗಿ ಕೊಡುವುದಕ್ಕೆ ಅವಕಾಶವಿದೆ, ಕೊಡಕೂಡದು ಅಂತ ಅಲ್ಲ.

Sri A. BHEEMAPPA NAIK (Chitaldrug District-General).—I appeal to you Sir not to allow any further questions because it would embarrass both the Government and the public. It is better if it is left as it is. It may be left to the good sense of the Government.

ಶ್ರೀ ಎಂ. ಮಾದಯ್ಯನವರು.—ಕೇಂದ್ರ ಸರ್ಕಾರ ದವರು ಕಮೀಷನ್ ನೇಮಕಮಾಡಿರುವುದು, ಅವರ ಸ್ಥಿತಿಗತಿಗಳನ್ನು ಪರಿಶೀಲನೆಮಾಡಿ ಅವರಿಗೆ ಹೆಚ್ಚು ರಿಯಾಯಿತಿ ಕೊಡುವುದಕ್ಕೋಸ್ಕರ ಅಲ್ಲವೇ ?

The Hon'ble Sri H. C. DASAPPA.—The Mysore Government cannot state anything more than what article 340 says. That is all. It is open to the Hon'ble Member to give any interpretation he thinks fit.

Mr. SPEAKER.—Next question No. 193.

Measures for restricting the Growth of Population in the State.

*Q.—**193. Sri T. MADIAH GOWDA** (Bangalore District—General).—Will the Government be pleased to state :—

(*a*) the figures that are available with them to show in what proportion the population in the State is growing ;

(*b*) whether they are implementing any measures to restrict the same ; if so, what they are ?

A.—**The Hon'ble Sri R. CHENNIGA. RAMIAH** (Minister for Local Self-Government).—

(*a*) The comparative rise of growth in population from decade to decade is as follows :—

Population in Lakhs.

1891—1901	...	5,539,399
1901—1911	...	5,806,193
1911—1921	...	5,978,892
1921—1931	...	6,557,302
1931—1941	...	7,329,149
1941—1951	...	9,071,678

(Provisional)

(*b*) No measures have been adopted so far to arrest the growth of population in the State.

Sri T. MADIAH GOWDA.—May I know the reason for the sudden jump in the population from 1941 Census to the 1951 census ? (laughter)

The Hon'ble Sri R. CHENNIGARAMIAH.—Because people are healthy. (Renewed laughter)

Sri T. MADIAH GOWDA.—Is it due to lot of people coming to Mysore from outside or whether it is due to any other reason ?

The Hon'ble Sri R. CHENNIGARAMIAH.—It is partly responsible. A large number of people have come from outside to Bangalore City. In rural parts, the health has improved, and due to several factors the percentage of population has increased this time.

Sri T. MADIAH GOWDA.—What is the number of persons that have come from outside to Mysore State during these ten years ?

The Hon'ble Sri R. CHENNIGARAMIAH.—I want notice.

ಶ್ರೀ ಎಚ್.ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಜನ ಸಂಖ್ಯೆ ಬಹಳ ಜಾಸ್ತಿ ಆಗಿರುವುದಕ್ಕೆ ಕಾರಣ, ಆಹಾರ ಅಭಾವದಿಂದ ಹೆಚ್ಚು ಜನಗಳ ಸಂಖ್ಯೆಕೊಟ್ಟರೆ ಹೆಚ್ಚು ಆಹಾರಸಿಕ್ಕುತ್ತದೆ ಎಂಬ ಉದ್ದೇಶದಿಂದ ಹೆಚ್ಚು ಸಂಖ್ಯೆ ಬರೆಸಿವ್ವಾರೆ ಎಂಬ ಅನುಮಾನ ಬಂದಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಹಾರದ ಜನಸಂಖ್ಯೆಯ ಪ್ರಕಾರ ಇನ್ನೂ ಜಾಸ್ತಿಬರ ಬೇಕಾಗಿತ್ತು. ಈಗ actual enumeration ಆದ ಮೇಲೆ ಬಂದ ಜನಸಂಖ್ಯೆಯನ್ನು ಕೊಟ್ಟಿದೆ.

ಶ್ರೀ ಎ. ಜಿ. ಬಂಡೀಗೌಡರು (ಮಂಡ್ಯ ಜಿಲ್ಲೆ).—(ಬ) ಪ್ರಶ್ನೆಗೆ ಉತ್ತರವಾಗಿ ಜನಸಂಖ್ಯೆ ಹೆಚ್ಚುವುದನ್ನು ತಡೆಗಟ್ಟಲು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ಎಂದು ತಿಳಿಸಿದ್ದೀರಿ. ಮುಂದೆ ಏನಾದರೂ ಕೈಕೊಳ್ಳುವುದಕ್ಕೆ ಸಾಧ್ಯವಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಯೋಚನೆ ಮಾಡಬೇಕು.

The Hon'ble Sri H. C. DASAPPA.—One of which is to appeal to persons like Sri Bandi Gowdh to co-operate. (loud laughter)

Sri H. SIDDAVEERAPPA (Chitaldrug District—General).—Is it not a scientific theory that productivity is greater in the population which is poorer ? (laughter)

The Hon'ble Sri R. CHENNIGARAMIAH.—There is very good production of human beings though there is no production in food. (laughter)

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಜನ ಸಂಖ್ಯೆ ಜಾಸ್ತಿಯಾಗಿದ್ದಕ್ಕೆ ಸರ್ಕಾರದವರಿಗೆ ಭಯ ಬಂದಿದೆಯೇ ? (ಸಭೆಯಲ್ಲಿ ನಗು !)

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಹಾರದ ಅಭಾವ ಬರುತ್ತದೆಯಲ್ಲಾ ಎಂದು ಸ್ವಲ್ಪ ಮಟ್ಟಿಗೆ ಭಯ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಕೆಲಸ ಮಾಡುವವರ ಸಂಖ್ಯೆ ಜಾಸ್ತಿ ಆಯಿತು ಎಂದು ಸಂತೋಷವಿಲ್ಲವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೆಲಸ ಮಾಡುವವರು ತಯಾರಾಗಿದ್ದರೆ ಸಂತೋಷವೇ. ಆದರೆ ಅದರಲ್ಲಿ ಕೆಲಸ ಮಾಡುವವರು ಎಷ್ಟು ಜನ ಆಗುತ್ತಾರೋ, ಕೆಲಸ ಮಾಡದೇ ಇರುವವರು ಎಷ್ಟು ಜನ ಆಗುತ್ತಾರೋ ಗೊತ್ತಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಹೆಂಗಸರ ಸಂಖ್ಯೆ ಕಡಿಮೆಯಾಗುತ್ತಾ ಇರುವುದು ಗೊತ್ತೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸ್ವಲ್ಪ ಕಡಿಮೆಯಾಗುತ್ತಾ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರಿಂದ ಅಪಾಯ ಎಂದು ತಿಳಿದುಕೊಂಡಿದ್ದೀರಾ ? (ಸಭೆಯಲ್ಲಿ ನಗು !).

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಪಾಯ ಏನೂ ಕಾಣುವುದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—(b)ಪ್ರಶ್ನೆಗೆ ಉತ್ತರವಾಗಿ " No measures have been adopted so far to arrest the growth of population " ಎಂದು ಹೇಳಿದ್ದೀರಿ. ಹೀಗೆ ಬಿಟ್ಟಲ್ಲಿ ಗಂಡಸರ ಸಂಖ್ಯೆ ಜಾಸ್ತಿಯಾಗಿ, ಹೆಂಗಸರ ಸಂಖ್ಯೆ ಕಡಿಮೆಯಾದರೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದಿದ್ದೀರಿ ?

(No answer)

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಮಲೆನಾಡಿನಲ್ಲಿ ಜನ ಸಂಖ್ಯೆ ಜಾಸ್ತಿಯಾಗಿರುವುದು ಗೊತ್ತೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಗೊತ್ತು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕಾರಣವೇನು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ಪ್ರದೇಶದಲ್ಲೆಲ್ಲಾ ಚೆನ್ನಾಗಿ ಡಿ.ಡಿ.ಟಿ. ಮುಂತಾದುವುಗಳನ್ನು ಒದಗಿಸಿ, ಖಾಯಿಲೆ ಕಡಿಮೆಯಾಗಿದೆ. ಜನಗಳು ಆರೋಗ್ಯವಂತರಾಗಿ, ದೃಢಕಾಯರಾಗಿದ್ದು ಅವರ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದ್ದಾರೆ.

(ಸಭೆಯಲ್ಲಿ ನಗು)

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಪಾಶ್ಚಿಮಾತ್ಯ ದೇಶಗಳಲ್ಲಿ ಜನ ಸಂಖ್ಯೆ ಜಾಸ್ತಿಯಾದರೆ ಬಹುಮಾನ ಕೊಡುತ್ತಾರೆ ಎಂಬುದು ನಿಜವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೆಲವು ಕಡೆ ಇರಬಹುದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಜನ ಸಂಖ್ಯೆಯನ್ನು artificial methods ಮೂಲಕ ತಡೆಗಟ್ಟುವುದು ಸರಿಯಲ್ಲ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

(ಉತ್ತರವಿಲ್ಲ)

Sri G. VEERAPPA (Chitaldrug District—General).—Do the Government consider the introduction of birth control clinics, monogomy and such other measures to control the growth of population ?

The Hon'ble Sri R. CHENNIGARAMIAH.—Government have not yet taken up any such schemes.

Sri G. VEERAPPA.—At least now do the Government think that the introduction of such measures as monogomy and birth control will control the growth of population?

The Hon'ble Sri R. CHENNIGARAMIAH.—It is a good suggestion.

Sri G. VEERAPPA.—I want to know whether the Government would consider the introduction of these measures?

The Hon'ble Sri R. CHENNIGARAMIAH.—Government have not yet taken up this question for consideration.

Sri D. H. CHANDRASEKHARAIYA (Chitaldrug District—General).—Do the Government consider that the growth of population is good for the country?

The Hon'ble Sri R. CHENNIGARAMIAH.—It is both good and bad for the country.

Sri D. H. CHANDRASEKHARAIYA.—Is it not necessary that the Government should have definite view in regard to checking the growth or otherwise of population?

Rajamantrapravina H. B. GUNDAPPA GOWDA (Hassan District—General).—Has the Hon'ble Member putting the question come to any decision? (laughter)

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).— ಪ್ರಜಾಸಂಖ್ಯೆ ಹೆಚ್ಚುತ್ತಿರುವುದು ಶುಭ ಸೂಚನೆ ಎಂದು ಸರ್ಕಾರದವರು ಭಾವಿಸುತ್ತಾರೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಶುಭ.....ಸೂಚನೆ.....ಹೌದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಪ್ರಜಾ ಸಂಖ್ಯೆಯ ಬೆಳವಣಿಗೆಯನ್ನು ತಡೆಗಟ್ಟುವುದು ಸಾಧ್ಯವಲ್ಲವೆಂಬುದು ಸರ್ಕಾರದ ಗಮನದಲ್ಲಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಯಾವುದೂ ಸರ್ಕಾರದ ಗಮನದಲ್ಲಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಪ್ರಜಾಸಂಖ್ಯೆಯನ್ನು ಕಡಿಮೆ ಮಾಡಲು ಮಕ್ಕಳು ಹೆಚ್ಚಾಗಿರುವವರ ಮೇಲೆ ಕಂದಾಯ ಹಾಕುವುದೇನಾದರೂ ಯೋಚನೆಯಿಲ್ಲದೆಯೆ? (ನಗು.)

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಮಕ್ಕಳಿಲ್ಲದೇ ಇರುವವರ ಮೇಲೆ ಕಂದಾಯ ಹಾಕುವುದನ್ನು ಕೆಲವು ಕಡೆ ಯೋಚನೆ ಮಾಡುತ್ತಿದ್ದಾರೆ. (ನಗು.)

Survey of illiteracy in the State.

*ಪ್ರಶ್ನೆ 16.—ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಡಿಸ್ಟ್ರಿಕ್ಟ್ ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಸಂಸ್ಥಾನದಲ್ಲಿ ಎಷ್ಟು ಮಂದಿ ಅನಕ್ಷರಸ್ಥರಿದ್ದಾರೆ;

(b) ಸಂಸ್ಥಾನದಲ್ಲಿರುವ ಅನಕ್ಷರಸ್ಥರ ಸಂಖ್ಯೆ ಎಷ್ಟೆಂಬುದನ್ನು ಸರ್ಕಾರದವರು "ಸರ್ವೆ" ಪರಿಶೀಲನೆ ಮಾಡಿಸಿ ತಿಳಿದಿರುವರೆ; ಮತ್ತು ಈ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದಕ್ಕೆ ಎಷ್ಟು ಕಾಲ ಹಿಡಿಯಬಹುದು?

ಉತ್ತರ.—ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು) On behalf of. [ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು] (ಪ್ರಧಾನ ಸಚಿವರು).

(a) 1941ನೆಯ ಇಸವಿಯ ಜನಗಣತಿಯ ಮೇರೆಗೆ ಅನಕ್ಷರಸ್ಥರು ಜನಸಂಖ್ಯೆಯಲ್ಲಿ ಶೇಕಡಾ 87 ಭಾಗದಷ್ಟು ಇದ್ದರು. ಈಗ ಶೇಕಡಾ ಯಾವ ಭಾಗದಷ್ಟು ಜನರು ಇನ್ನೂ ಅನಕ್ಷರಸ್ಥರಾಗಿದ್ದಾರೆಂಬುದು 1951 ನೆಯ ಇಸವಿಯ ಜನಗಣತಿಯ ಲೆಕ್ಕಗಳನ್ನು ಪೂರ್ತಿ ಮಾಡಿದ ನಂತರ ತಿಳಿಯುತ್ತದೆ.

(b) "ಸರ್ವೆ" ಪರಿಶೀಲನೆ ಮಾಡಿಸಿದ್ದಾರೆ. 1941ನೆಯ ಇಸವಿಯಲ್ಲಿ, ವಯಸ್ಕರ ಶಿಕ್ಷಣ ಸಮಿತಿಯವರು (ಆಡಲ್ಟ್ ಎಜ್ಯುಕೇಶನ್ ಕಮಿಟಿಯವರು) ಕೆಲಸ ಪ್ರಾರಂಭಮಾಡಿದ ತರುಣದಲ್ಲಿ ಅನಕ್ಷರತೆಯನ್ನು ನಿರ್ಮೂಲ ಮಾಡುವುದಕ್ಕಾಗಿ ಒಂದು ಯೋಜನೆಯನ್ನು ತಯಾರಿಸಲಾಯಿತು. ಆ ಯೋಜನೆಯ ಮೇರೆಗೆ, ಸಂಸ್ಥಾನದಲ್ಲಿ (12 ವರ್ಷಕ್ಕೆ ಮೇಲ್ಪಟ್ಟು 40 ವರ್ಷಕ್ಕಿಂತ ಕಡಮೆ ವಯಸ್ಸಿನವರಾಗಿ) ಅನಕ್ಷರಸ್ಥರಾಗಿದ್ದು ಓದಬರಹಗಳನ್ನು ಕಲಸಬಹುದಾಗಿದ್ದವರು, 13·1 ಲಕ್ಷ ಮಂದಿ ಗಂಡಸರು. ಮತ್ತು 15·5 ಲಕ್ಷ ಮಂದಿ ಹೆಂಗಸರು. ಕಳೆದ ಹತ್ತು ವರ್ಷಗಳಲ್ಲಿ ಮೇಲೆ ಕಂಡ ಸಮಿತಿಯವರು ಸುಮಾರು 2½ ಲಕ್ಷ ಮಂದಿ ಮನುಷ್ಯರನ್ನು ಅಕ್ಷರಸ್ಥರನ್ನಾಗಿ ಮಾಡಿದ್ದಾರೆ.

ಅನಕ್ಷರತೆಯನ್ನು ನಿರ್ಮೂಲ ಮಾಡುವುದಕ್ಕೆ ಹಿಡಿಯಬಹುದಾದ ಕಾಲದ ವಿಷಯದಲ್ಲಿ, ಆ ಸಮಿತಿಯವರ ಯೋಜನೆಯ ಮೇರೆಗೆ ಆ ಕೆಲಸವನ್ನು ಸಾಧಿಸುವುದಕ್ಕೆ ಸುಮಾರು 10 ವರ್ಷಗಳು ಹಿಡಿಯಬಹುದೆಂದು ಹೇಳಬಹುದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಸಂಸ್ಥಾನದಲ್ಲಿ ಇಷ್ಟು ಜನ ವಿದ್ಯಾವಂತರಲ್ಲವೆಂದು ತಿಳಿಸಿದೆ; ಅವರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಕೈಗೊಂಡಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಸರ್ಕಾರದವರು ಎಷ್ಟು ಹಣವನ್ನೊದಗಿಸಬಹುದೋ ಅಷ್ಟನ್ನೂ ಓದಗಿಸಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಪ್ರೈಮರಿ ಸ್ಕೂಲುಗಳನ್ನು ಜಾಸ್ತಿ ಮಾಡಿದ್ದಾರೆ; ವಯಸ್ಕರ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿದ್ದೇವೆ; ಹೀಗೆ ನಾನಾ ಕಾರ್ಯ ಕ್ರಮಗಳನ್ನು ಕೈಗೊಂಡಿದ್ದೇವೆ. ಇದೇ ರೀತಿ ಮುಂದುವರಿಸಿಕೊಂಡು ಹೋದರೆ ಹತ್ತು ವರ್ಷಗಳಲ್ಲಿ ಎಷ್ಟು ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತದೆಂಬುದು ಈ ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ.